

ಗ್ರಾಮೀಣಾಭಿವೃದ್ಧಿ ಸೇವೆ : ಗ್ರಾಮಸ್ಥರಿಗೆ ಉತ್ತಮ ಬೇಸಾಯ ಕ್ರಮದ ಬಗ್ಗೆ ತರಬೇತಿ

ಇನ್ನಿತರ ಆಯೋಜನೆಗಳನ್ನೂ ಆರಂಭಿಸಿದೆ. ೩) ಛತ್ತೀಸ್‌ಗಢ ರಾಜ್ಯದಲ್ಲಿರುವ ನಮ್ಮ ನಾರಾಯಣಪುರ ಕೇಂದ್ರವು ದೂರದೂರದ ಹಳ್ಳಿಗಳಲ್ಲಿ ೧೬ ಆಳವಾದ ಕೊಳವೆ ಬಾವಿಗಳನ್ನೂ, ೪ ಕೊಳಗಳನ್ನೂ, ೬ ಬಾವಿಗಳನ್ನೂ ತೋಡಿಸಿದೆ.

ಪ್ರಸಕ್ತ ಸಾಲಿನಲ್ಲಿ, ರಾಮಕೃಷ್ಣ ಮಠವು ಪಶ್ಚಿಮ ಬಂಗಾಳದ ಎರಡು ಉಪಕೇಂದ್ರಗಳನ್ನು – ಒಂದು ಕೊಲ್ಕತಾದ ಸಿಂಥಿಯಲ್ಲಿ, ಮತ್ತಿನ್ನೊಂದು ಹೂಗ್ಲಿ ಜಿಲ್ಲೆಯ ಗೌರ್‌ಹಾಟಿಯಲ್ಲಿ – ಸ್ವತಂತ್ರ ಕೇಂದ್ರಗಳಾಗಿ ಪರಿವರ್ತಿಸಿತು.

**ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ಈ ನೂತನ ಯೋಜನೆಗಳು ಗಮನಾರ್ಹ :** ೧) ಚೆನ್ನೈ ಮಠದಿಂದ ಸ್ವಾಮಿ ವಿವೇಕಾನಂದರ ಬಗ್ಗೆ ಭಾರತದಲ್ಲಿಯೇ ಮೊಟ್ಟಮೊದಲ stereoscopic 3D animated ಚಲನಚಿತ್ರದ ನಿರ್ಮಾಣ. ೨) ಪುಣೆ ಮತ್ತು ತ್ರಿಚೂರು ಕೇಂದ್ರಗಳಿಂದ ಸಂಚಾರಿ ಪುಸ್ತಕಮಳಿಗೆಗಳ ಆರಂಭ. ೩) ತಿರುವನಂತಪುರದ ಅಸ್ಪತ್ರೆಯಲ್ಲಿ 'Echocardiogram and colour doppler' ಗಳಿಂದೊಡಗೂಡಿದ 'Ultrasound scanning' ಯಂತ್ರದ ಸ್ಥಾಪನೆ ೪) ರಾಜ್‌ಕೋಟ್ ಕೇಂದ್ರದಿಂದ 'ಮಾದಾರೀ' ಜಾತಿಯವರಿಗಾಗಿ (ಹಾವಾಡಿಗರು) ಪಾರೇವಾಡ ಹಳ್ಳಿಯಲ್ಲಿ ಶಾಲಾ ಕಟ್ಟಡ ಹಾಗೂ ಔದ್ಯೋಗಿಕ ತರಬೇತಿ ಕೇಂದ್ರಗಳ ಕಟ್ಟಡದ ನಿರ್ಮಾಣ ಮತ್ತು ಭೂಜ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ಷೆಡ್ಡುಗಳ ನಿರ್ಮಾಣ.

**ಭಾರತದ ಹೊರಗೆ ಈ ಹೊಸ ಬೆಳವಣಿಗೆಗಳು ಉಲ್ಲೇಖಾರ್ಹ :** ೧) ವಿಧ್ವಂಸಕ ಭೂಕಂಪ ಮತ್ತು ಸುನಾಮಿಯ ಹಾಳಿಗೆ ಒಳಪಟ್ಟ ಕ್ಷೇತ್ರಗಳಲ್ಲಿ ನಮ್ಮ ಜಪಾನ್ ಕೇಂದ್ರವು ಪರಿಹಾರಕಾರ್ಯಗಳನ್ನು ಕೈಗೊಂಡಿತು. ೨) ಫ಼ಿಜಿಯ ನಾದಿ ಕೇಂದ್ರವು ನೆರೆಹಾವಳಿ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಕೈಗೊಂಡಿತು. ೩) ಮಲೇಷಿಯಾದ ನಮ್ಮ ಕೇಂದ್ರದ ಪ್ರೇರಣೆಯಿಂದ 'ಪೋಸ್ಟ್ ಮಲೇಷಿಯಾ' ಸಂಘಟನೆಯು ಸ್ವಾಮಿ ವಿವೇಕಾನಂದರ ಚಿತ್ರವಿರುವ ಅಂಚೆ ಚೀಟಿಯನ್ನು ಹೊರತಂದಿದೆ. ೪) ದಕ್ಷಿಣ ಆಫ್ರಿಕಾದ ಡರ್ಬನ್ ಕೇಂದ್ರವು ಕ್ವಾ ಮಾಶು ಎಂಬಲ್ಲಿನ ಒಂದು ಹಿರಿಯ ಪ್ರಾಥಮಿಕ ಶಾಲೆಗಾಗಿ ಶೈಕ್ಷಣಿಕ ಹಾಗೂ ಕೌಶಲ ವಿಕಾಸದ ಕೇಂದ್ರವನ್ನು ನಿರ್ಮಾಣ ಮಾಡಿಕೊಟ್ಟಿದೆ.

## ೨೦೧೧–೧೨ ರ ಸಾಲಿನ ಸೇವಾಕಾರ್ಯಗಳ ಒಟ್ಟು ಸಾರಾಂಶ

**೧. ಪರಿಹಾರ ಮತ್ತು ಪುನರ್ವಸತಿ :** ಪ್ರಸಕ್ತ ಸಾಲಿನಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ದೇಶದ ವಿವಿಧ ಭಾಗಗಳಲ್ಲಿ ಬೃಹತ್ ಪ್ರಮಾಣದ ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳನ್ನು ನಡೆಸಿದೆ. ೪.೯೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೊಂಡ ಯೋಜನೆಗಳಿಂದ ೧೬೫೮ ಗ್ರಾಮಗಳ, ೧.೨೭ ಲಕ್ಷ ಕುಟುಂಬಗಳ, ೩.೬೪ ಲಕ್ಷ ಜನರು ನೆರವನ್ನು ಪಡೆದಿದ್ದಾರೆ.

**೨. ಸಮಾಜ ಕಲ್ಯಾಣ ಕಾರ್ಯಕ್ರಮಗಳು :** ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ೨೭ . ೮೫ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧರು, ರೋಗಿಗಳು ಹಾಗೂ ನಿರ್ಗತಿಕರಿಗೆ ಆರ್ಥಿಕ ನೆರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗಿದೆ. ಸುಮಾರು ೫೫ . ೮೮ ಲಕ್ಷ ಫಲಾನುಭವಿಗಳು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

**೩. ವೈದ್ಯಕೀಯ ಸೇವೆಗಳು :** ವೈದ್ಯಕೀಯ ಸೇವೆಗಳಿಗಾಗಿ ೧೧೯ . ೮೭ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಈ ಯೋಜನೆಗಳ ಅಡಿಯಲ್ಲಿ ೧೫ ಆಸ್ಪತ್ರೆಗಳು, ೧೨೩ ಚಿಕಿತ್ಸಾಲಯಗಳು, ೫೯ ಸಂಚಾರಿ ವೈದ್ಯಕೀಯ ಘಟಕಗಳ ಮೂಲಕ ಸುಮಾರು ೭೭ . ೮೨ ಲಕ್ಷ ಜನರಿಗೆ ವೈದ್ಯಕೀಯ ಸೇವೆಯನ್ನು ಒದಗಿಸಲಾಗಿದೆ.

**೪. ಶೈಕ್ಷಣಿಕ ಕಾರ್ಯಕ್ರಮಗಳು:** ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒಟ್ಟು ೨೨೦ . ೪೨ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಶಿಶುವಿಹಾರದಿಂದ ವಿಶ್ವವಿದ್ಯಾನಿಲಯದವರೆಗೆ ಇರುವ ನಮ್ಮ ಹಲವಾರು ವಿದ್ಯಾಸಂಸ್ಥೆಗಳಲ್ಲಿ ಸುಮಾರು ೩. ೨೩ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆದಿದ್ದಾರೆ.

**೫. ಗ್ರಾಮೀಣಾಭಿವೃದ್ಧಿ ಮತ್ತು ಬಡಕಟ್ಟು ಜನಾಂಗದವರ ಕಲ್ಯಾಣ ಕಾರ್ಯಕ್ರಮಗಳು :** ಗ್ರಾಮೀಣ ಹಾಗೂ ಬುಡಕಟ್ಟು ಜನಾಂಗದವರಿಗಾಗಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ೬೭ . ೭೪ ಲಕ್ಷ ಜನರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಇದಕ್ಕೆ ಖರ್ಚು ಮಾಡಿದ ಮೊತ್ತ ೩೭ . ೪೬ ಕೋಟಿ ರೂಪಾಯಿಗಳು.

ಈ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್ನಿನ ಸಕಲ ಸದಸ್ಯರಿಗೂ ಸ್ನೇಹಿತರಿಗೂ, ಅವರ ಸಹಾಯ ಸಹಕಾರಗಳಿಗಾಗಿ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಸ್ವಾಮಿ ಸುಹಿತಾನಂದ**

೧೬ ಡಿಸೆಂಬರ್ ೨೦೧೨ ಪ್ರಧಾನ ಕಾರ್ಯದರ್ಶಿಗಳು

# ನೇಮಿನಾಥ

**ಮೂಲ ಕಥೆ : ಎಸ್.ಸಿ. ರಂಗಸ್ವಾಮಿ ಮತ್ತು ಭಾಮ  ಚಿತ್ರ : ಶಂಕರ್**

**1** ರಾಜ ಸಮುದ್ರವಿಜಯನು ಗುಜರಾತ್ ರಾಜ್ಯವನ್ನು ಆಳುತ್ತಿದ್ದನು. ಅವನ ರಾಣಿಯ ಹೆಸರು ಶಿವದೇವಿ ಎಂದು. ಅವರು ತಮ್ಮ ಮಗನಿಗೆ ನೇಮಿನಾಥ ಎಂದು ಹೆಸರಿಟ್ಟಿದ್ದರು.


**2** ಉಗ್ರಸೇನ ಎಂಬ ರಾಜನಿಗೆ ರಾಜಮತಿ ಎಂಬ ಸುಂದರಳಾದ ಮಗಳಿದ್ದಳು. ಸಮುದ್ರವಿಜಯನು ಅವಳನ್ನು ತನ್ನ ಮಗನಾದ ನೇಮಿನಾಥನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿದನು.

ಹಿರಿಯರ ಆಶೀರ್ವಾದದೊಂದಿಗೆ ಮದುವೆ ನಿಶ್ಚಿತವಾಯಿತು.

**3**





**4** ಸಮುದ್ರವಿಜಯನ ಆಸ್ಥಾನದಲ್ಲಿ :




**5** ಮದುವೆಯ ದಿವಸ ಜನರು ಬೀದಿಗಳ ತುಂಬ ವರನ ಆಗಮನವನ್ನು ವೀಕ್ಷಿಸಲು ನೆರೆದರು. ನೇಮಿನಾಥನು ಭಾರೀ ಸೈನ್ಯದೊಂದಿಗೆ ಕೂಡಿಕೊಂಡು, ತನ್ನ ಬಂಧುಬಾಂಧವರೊಂದಿಗೆ ಉಗ್ರಸೇನನ ಅರಮನೆಯತ್ತ ಮೆರವಣಿಗೆಯಲ್ಲಿ ಹೊರಟನು. ಆನೆಯಲ್ಲಿ ಕುಳಿತಿದ್ದ ಅವನ ಸುತ್ತಲೂ ಹರ್ಷ ಮತ್ತು ಹಬ್ಬದ ವಾತಾವರಣ ಮೈದೋರಿತ್ತು.

**6**






**7** ನೇಮಿನಾಥನು ಇನ್ನೇನು ಉಗ್ರಸೇನನ ಅರಮನೆಯನ್ನು ಸಮೀಪಿಸಬೇಕು, ಅಷ್ಟರಲ್ಲಿ ಬೀದಿಯ ಬದಿಯಲ್ಲಿದ್ದ ದೊಡ್ಡ ದೊಡ್ಡ ಪಂಜರಗಳನ್ನು ನೋಡಿದನು. ಅವುಗಳಲ್ಲಿ ಹಲವಾರು ಬಗೆಯ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಕೂಡಿಡಲಾಗಿತ್ತು. ಅವೆಲ್ಲವೂ ಭೀಕರ ನೋವಿನಿಂದ ಕಿರುಚಿಕೊಳ್ಳುತ್ತಿದ್ದವು.



**8** ಅವುಗಳ ಆಕ್ರಂದನವನ್ನು ಕಂಡು ನೇಮಿನಾಥನ ಸಂತೋಷವೆಲ್ಲ ನಾಶವಾಗಿಬಿಟ್ಟಿತು.

**9** ಇದನ್ನು ಕೇಳಿ ನೇಮಿನಾಥನಿಗೆ ಬಹಳ ಆಘಾತವಾಯಿತು. ಅವನ ಎದೆ ಬಡಿತ ಜಾಸ್ತಿಯಾಯಿತು.





**10**




**11** ಒಂದು ದೃಢವಾದ ನಿಶ್ಚಯ ನೇಮಿನಾಥನ ಮನಸ್ಸಿನಲ್ಲಿ ಮೂಡಿಬಂತು.




ನೇಮಿನಾಥನು ಆನೆಯಿಂದ ಕೆಳಕ್ಕೆ ಇಳಿದನು. ಯಾರೊಡನೆಯೂ ಮಾತನಾಡದೆ ತನ್ನ ಅರಮನೆಗೆ ಧಾವಿಸಿ ಬಂದನು.